**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ರವರು ದಿನಾಂಕ 12.3.2025 ರಂದು ಪ್ರಸ್ತಾಪಿಸಿರುವ ಶೂನ್ಯ ವೇಳೆಯಲ್ಲಿ "ಹಾಲಿನ ದರವನ್ನು ಹೆಚ್ಚಿಸುತ್ತಿರುವ ಬಗ್ಗೆ" ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ಪ್ರಶ್ನೆ:** ದಿನಾಂಕ 6.3.2025ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಮಾನ್ಯ ಪಶು ಸಂಗೋಪನಾ ಸಚಿವರು ಹಾಲಿನ ದರವನ್ನು ಏರಿಸುವ ಬಗ್ಗೆ ಸ್ಪಷ್ಟ ಹೇಳಿಕೆಯನ್ನು ನೀಡಿರುತ್ತಾರೆ. ಈಗಾಗಲೇ ಸರ್ಕಾರ ಪೆಟ್ರೋಲ್, ಡಿಸೆಲ್, ಎಲ್ಲಾ ರೀತಿ ಅಡಿಗೆ ಎಣ್ಣೆ, ಮುದ್ರಾಂಕ ಶುಲ್ಕ, ಸ್ಟ್ಯಾಂಪ್ ಪೇಪರ್‌ಗೆ ಕನಿಷ್ಠ 100 ರೂ ಇದ್ದದ್ದು, 500 ರೂಗೆ ಬಸ್ ದರ, ಮೆಟ್ರೋ ದರ, ಅಬಕಾರಿ ಮಧ್ಯದ ದರ, ವಿದ್ಯುತ್ ದರ, ಹೀಗೆ ಇನ್ನು ಹತ್ತು ಹಲವಾರು ಬೆಲೆಗಳನ್ನು ಒಂದಲ್ಲ ಎರೆಡು ಬಾರಿ ಏರಿಕೆ ಮಾಡಿ ಬಡವರು ಮಧ್ಯಮ ವರ್ಗದವರು ರೈತರು, ಕೂಲಿ ಕಾರ್ಮಿಕರು ಜೀವಿಸುವುದೇ ದುಸ್ಥಿತಿಗೆ ಬಂದಿರುವಾಗ ಗಾಯದ ಮೇಲೆ ಬರೆ ಎಳೆದಂತೆ ಹಾಲಿನ ದರವನ್ನು ಒಂದು ಲೀಟರ್‌ಗೆ 10 ರೂಗಳನ್ನು ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ. 2024ರ ಅಕ್ಟೋಬರ್ ನಿಂದ 2025ರ ಫೆಬ್ರುವರಿಯವರೆಗೆ ಹಾಲಿನ ಪ್ರೋತ್ಸಾಹ ಮೊತ್ತ ನೀಡಲು ರೂ.656.07 ಕೋಟಿ ಬಾಕಿ ಇರುವುದರಿಂದ ಇದನ್ನು ಭರಿಸಲು ಈ ರೀತಿ ಬೇಕಾಬಿಟ್ಟಿ ಹಾಲಿನ ದರವನ್ನು ಏರಿಸುತ್ತಿರುವುದು ಖಂಡನೀಯ. ಇನ್ನು ನೀರಿನ ದರ ಏರಿಸಲು ಈಗಾಗಲೇ ಪ್ರಸ್ತಾವನೆಯನ್ನು ಸರ್ಕಾರದ ಮುಂದೆ ಮಂಡಿಸಲಾಗಿದೆ. ಸರ್ಕಾರಕ್ಕೆ ವರ್ಷವಿಡೀ ದರ ಏರಿಸುವುದನ್ನೇ ಕಾಯಕ ಮಾಡಿಕೊಂಡಿದೆ.
ಆದ ಕಾರಣ, ನಗರವಾಸಿಗಳು, ಕೂಲಿ ಕಾರ್ಮಿಕರು ಮದ್ಯಮ ವರ್ಗದವರ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಹಾಲಿನ ದರ ಏರಿಸುವುದನ್ನು ಕೈಬಿಟ್ಟು, ಶ್ರೀ ಸಾಮಾನ್ಯರು ಬದುಕಲು ಅನುವು ಮಾಡಿಕೊಡಬೇಕೆಂದು ಶೂನ್ಯ ವೇಳೆಯಲ್ಲಿ ಸರ್ಕಾರದ ಗಮನ ಸೆಳೆಯುತ್ತೇನೆ.

**ಉತ್ತರ**: ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತದ 16 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ ಒಟ್ಟು 15,887 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ ಒಟ್ಟು 26,68,937 ಸಂಖ್ಯೆಯ ನೊಂದಾಯಿತ ಹಾಲು ಉತ್ಪಾದಕರಿದ್ದು, ಪ್ರತಿ ದಿನ ಅಂದಾಜು ಸರಾಸರಿ 9.0 ಲಕ್ಷ ಉತ್ಪಾದಕರಿಂದ 90 ಲಕ್ಷ ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತಿದ್ದು, ಸರಾಸರಿ ಹಾಲಿನ ಖರೀದಿ ದರ ರೂ.31.49 ಗಳನ್ನು ಪಾವತಿಸಲಾಗುತ್ತಿದೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ, ಹಾಲಿನ ಖರೀದಿ ದರ ಕಡಿಮೆ ಇರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಹೈನುಗಾರಿಕೆಗೆ ಹೆಚ್ಚಿನ ವೆಚ್ಚವಾಗುತ್ತಿರುವ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದ ಜನರು ಹೈನುಗಾರಿಕೆಯನ್ನು ತ್ಯಜಿಸಿ ಪಟ್ಟಣಗಳಿಗೆ ವಲಸೆ ಬರುತ್ತಿರುವುದನ್ನು ತಡೆಗಟ್ಟಲು ಹಾಲಿನ ಉತ್ಪಾದನೆ ವೆಚ್ಚಕ್ಕನುಗುಣವಾಗಿ ಹಾಲಿನ ಮಾರಾಟ ದರವನ್ನು ಹೆಚ್ಚಿಸಿ, ಹೆಚ್ಚಿಸಿದ ಹಾಲಿನ ದರವನ್ನು ಉತ್ಪಾದಕರುಗಳಿಗೆ ನೀಡುವ ಮೂಲಕ ಹೈನುಗಾರಿಕೆಯನ್ನು ಉತ್ತೇಜಿಸಲಾಗುತ್ತಿದೆ.

..2

ಮುಂದುವರೆದು, ಹೊರ ರಾಜ್ಯಗಳಲ್ಲಿ ಹಾಲಿನ ಖರೀದಿ ದರದ ವಿವರ ಈ ಕೆಳಕಂಡಂತಿರುತ್ತದೆ.

| **ಕ್ರ.ಸಂ.** | **ರಾಜ್ಯ** | **ಹಾಲಿನ ಖರೀದಿ** (ರೂ.ಗಳಲ್ಲಿ) |
|---|---|---|
| 1 | ಆಂಧ್ರ ಪ್ರದೇಶ | 34.80 |
| 2 | ತಮಿಳುನಾಡು | 32.35 |
| 3 | ಕೇರಳ | 41.78 |
| 4 | ಮಹಾರಾಷ್ಟ್ರ | 30.00 |
| 5 | ಗುಜರಾತ | 36.49 |

**ಸಂಖ್ಯೆ: ಪಸಂಮೀ 31 ಕಹಾಮ 2025**

**(ಕೆ.ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು